

# ಕಲೆಯಲ್ಲಿ ಕಾನನ

ಕೊಡಗು ಜಿಲ್ಲೆಯಲ್ಲಿ ಹುಟ್ಟಿ ಬೆಳೆದ ಭವಾನಿ ಅವರಿಗೆ 'ಪ್ರಕೃತಿ' ಸಹಜ ಒಡನಾಡಿ. ಕಲಾಕೃತಿಗಳ ಮೂಲಕ ಪರಿಸರ ಜಾಗೃತಿ ಮೂಡಿಸುತ್ತಿರುವ ಅವರು, ಇದೀಗ ವರ್ಣಚಿತ್ರಗಳಿಂದ ಕಾನನದ ಕಥೆ ಹೇಳುತ್ತಿದ್ದಾರೆ.

■ ಸುಮಲತಾ ಎನ್‌

ಕೊಡಗು ಜಿಲ್ಲೆಯ ಕಾಫಿ ತೋಟಗಳ ಕಂಪಿನ ನಡುವೆ ಬೆಳೆದ ಭವಾನಿ ಜಿ.ಎಸ್. ಅವರಿಗೆ ಪ್ರಕೃತಿಯ ಒಡನಾಟ ಮೆಚ್ಚು. ಕಾಫಿ ತೋಟಗಳು, ಬೆಟ್ಟಗಳು, ಸುತ್ತಮುತ್ತಲ ಹಸಿರಿನ ಪರಿಸರ, ನದಿ ತೊರೆ, ಅರೆ ಕಾಡಿನ ಜೊತೆಗೆ ಸಮಯ ಕಳೆಯುವುದೆಂದರೆ ಅವರಿಗೆ ಇನ್ನಿಲ್ಲದ ಪ್ರೀತಿ. ಈ ಪ್ರೀತಿಯೇ ಅವರನ್ನು ಕಲೆಯ ಹಾದಿ ಹಿಡಿಯಲು ಪ್ರೇರೇಪಿಸಿದೆ.

ಕೊಡಗು ಜಿಲ್ಲೆಯಲ್ಲಿ ಹುಟ್ಟಿ, ಸದ್ಯ ಬೆಂಗಳೂರಿನಲ್ಲಿ ವಾಸಿಸುತ್ತಿರುವ ಭವಾನಿ ಅವರು ಸುಮಾರು 25 ವರ್ಷಗಳಿಂದಲೂ ಬಹು ಪ್ರಕಾರದ ಕಲಾ ಮಾಧ್ಯಮಗಳ ಪ್ರಯೋಗಗಳಲ್ಲಿ ತೊಡಗಿಕೊಂಡವರು. ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಚಿತ್ರಕಲಾ ಪ್ರದರ್ಶನಗಳನ್ನು ನೀಡಿದವರು. ಇದೀಗ ಬೆಂಗಳೂರಿನ 'ಅಂಬರ'ದಲ್ಲಿ, ತಮ್ಮ 'ಫಾರೆಸ್ಟ' ಚಿತ್ರಕಲಾ ಪ್ರದರ್ಶನದ ಮೂಲಕ ಕಾಡಿನ ಕಥೆ ಹೇಳುತ್ತಿದ್ದಾರೆ.

ತುಮಕೂರಿನ ಕಲಾನಿಕೇತನದಲ್ಲಿ ಬಿಎಫ್‌ಎ ಹಾಗೂ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಎಂಎಫ್‌ಎ ಪೂರೈಸಿರುವ ಅವರು, ತಮ್ಮ ಕಲೆಗೆ ಪರಿಸರವನ್ನೇ ಸ್ಫೂರ್ತಿಯನ್ನಾಗಿಸಿಕೊಂಡವರು. ವರ್ಣಚಿತ್ರ ಕಲೆಯೊಂದಿಗೆ ಕಿರುಚಿತ್ರಗಳನ್ನೂ ನಿರ್ಮಿಸುವುದರೊಂದಿಗೆ ಕಲೆಯ ಹೊಸ ಪ್ರಯೋಗಗಳಲ್ಲೂ ತೊಡಗಿಕೊಂಡವರು. ಮೂವಿಂಗ್ ಇಮೇಜಸ್, ಫೋಟೊಗ್ರಫಿ ಹಾಗೂ ಕಾಡಿನ ಪರಿಸರದಲ್ಲಿ ಆಯಾ ಕಾಲದಲ್ಲಿ ಸಿಗುವ ವಸ್ತುಗಳನ್ನು ಬಳಸಿ ಮಾಡುವ 'ಲ್ಯಾಂಡ್ ಆರ್ಟ್' (ಸ್ಥಳ ನಿರ್ದಿಷ್ಟ ಕಲೆ **site specific land art**) ಕಲಾಪ್ರಕಾರವನ್ನೂ ಕೈಗೆತ್ತಿಕೊಂಡರು.

'ಕಾಫಿ ತೋಟಗಳು, ಬೆಟ್ಟಗಳು, ಅರೆ ಕಾಡಿನಂಥ ಪರಿಸರದಲ್ಲಿ ನಮ್ಮ